# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 21, ಹೆಬ್ಬಾಳ, ಬೆಂಗಳೂರು-24

ಸಂಖ್ಯೆ: ಸ.ಅ/ವಾ-21/ಪಿ.ಆರ್/29/2022-23 ದಿನಾಂಕ:-24-08-2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

ವಿಷಯ:-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-29-08-2022 ರಂದು ವಾರ್ಡ್ ನಂ:21 ಹೆಬ್ಬಾಳದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

## :: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಗಿರೀಶ್.ವಿ.ಕೆ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ ಮೋಹನ್ ಕುಮಾರ್ | ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-21 |
| 3. | ಶ್ರೀ. ಶ್ರೇಯಸ್ ಎಂ.ಎಸ್ | ಸಹಾಯಕ ಅಭಿಯಂತರರು (ಕಿಯೊನಿಕ್ಸ್) ವಾರ್ಡ್ ನಂ. 21 |
| 4. | ಶ್ರೀನಿವಾಸ | ಮೇಲ್ವಿಚಾರಕರು, (ಘನತ್ಯಾಜ್ಯ) |
| 5. | ಶ್ರೀ. ಸೀನಪ್ಪ | ಅಧ್ಯಕ್ಷರು 1ನೇ ಬ್ಲಾಕ್ ಆನಂದ ನಗರ |
| 6. | ಶ್ರೀ.ಎನ್.ಶ್ರೀನಿವಾಸನ್ | ಉಪಾಧ್ಯಕ್ಷರು 1ನೇ ಬ್ಲಾಕ್ ಆನಂದನಗರ, |
| 7. | ಶ್ರೀ. ಅರುಣ್‌ಕಾರಂತ್ | ಸ್ಥಳೀಯ ನಿವಾಸಿ |
| 8. | ಶ್ರೀ. ಸಂಜಯ್ | ಸ್ಥಳೀಯ ನಿವಾಸಿ |
| 9. | ಶ್ರೀ.ಕೆ.ಪಿ.ದಿನಕರ್‌ಶೆಟ್ಟಿ | ಸ್ಥಳೀಯ ನಿವಾಸಿ |
| 10. | ಶ್ರೀ. ಚಂದ್ರಮೋಹನ್ | ಸ್ಥಳೀಯ ನಿವಾಸಿ |
| 11. | ಶ್ರೀ. ಪಿ.ಎಸ್.ಶ್ರೀನಿವಾಸನ್ | ಸ್ಥಳೀಯ ನಿವಾಸಿ |
| 12. | ಶ್ರೀ. ಬಿಳಗಿ | ಸ್ಥಳೀಯ ನಿವಾಸಿ |
| 13. | ಶ್ರೀ. ಬಿ.ಎನ್.ಬಸವರಾಜ್ | ಸ್ಥಳೀಯ ನಿವಾಸಿ |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಗಿರೀಶ್.ವಿ.ಕೆ ರವರನ್ನು ಹಾಗೂ ವಾರ್ಡ್ ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಈ ದಿನ ನಡೆದ ಸಭೆಯಲ್ಲಿ ಸಾರ್ವಜನಿಕರು ಈ ಕೆಳಕಂಡ ಕುಂದು ಕೊರತೆಗಳನ್ನು ಮನವಿ ಸಲ್ಲಿಸಿರುತ್ತಾರೆ.

1. ಕುಪ್ಪರಾಜ ಪಾರ್ಕ್ ಮತ್ತು ಚೋಳನಗರ 2ನೇ ಮುಖ್ಯ ರಸ್ತೆಯಲ್ಲಿ ಹೂಳೆತ್ತಲು ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು.
2. ಚೋಳನಗರ 2ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ಪೈಪ್ ಅನ್ನು ಬದಲಾಯಿಸಿ ಕೊಡುವಂತೆ ಕೋರಿದರು.
3. ಆನಂದನಗರದ ಕೆವಿನ್ ಪಾರ್ಕ್ ಬಳಿ ಕಸವನ್ನು ವಿಲೇವಾರಿ ಮಾಡುವಂತೆ ಸಾರ್ವಜನಿಕರು ಕೋರಿದರು.
4. ಆನಂದನಗರದ ಎಸ್.ಬಿ.ಎಂ. ಕಾಲೋನಿ 4ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಪರಿವರ್ತಕವನ್ನು ಬದಲಾಯಿಸಡಿಕೊಡುವಂತೆ ಸಾರ್ವಜನಿಕರು ಮನವಿ ಮಾಡಿದರು.
5. ಆನಂದನಗರ 7ನೇ ಮುಖ್ಯರಸ್ತೆಯಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಿದ್ದು, ಅದಕ್ಕೆ ಸಂಪರ್ಕ ನೀಡಲು ಹಾಗೂ ಮ್ಯಾನ್‌ಹೋಲ್ ದುರಸ್ಥಿಪಡಿಸಿಕೊಡುವಂತೆ ಮತ್ತು ಜಿಯೋ ಕೇಬಲ್ ಗುಂಡಿಯನ್ನು ಮುಚ್ಚಿಕೊಡುವಂತೆ ನಿವಾಸಿಗಳು ಮನವಿ ಸಲ್ಲಿಸಿದರು.
6. ಆನಂದನಗರ 1ನೇ ಬ್ಲಾಕ್‌ನಲ್ಲಿ ಕುಡಿಯುವ ನೀರು ಸರಿಯಾಗಿ ನಿರ್ವಹಣೆ ಮಾಡಲು ಸಾರ್ವಜನಿಕರು ಮನವಿ ಮಾಡಿದರು.

7. ಎ.ಜಿ.ಎಸ್ ಕಾಲೋನಿ 5ನೇ ಮತ್ತು 7ನೇ ಮುಖ್ಯರಸ್ತೆ, ಎಸ್.ಬಿ.ಎಂ ಕಾಲೋನಿ 5ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಪೋಲ್ ಆಗುತ್ತಿದ್ದು, ಅದನ್ನು ಸರಿಪಡಿಸಲು ಸಾರ್ವಜನಿಕರು ಮನವಿ ಮಾಡಿದರು.
8. ಕುಪ್ಪರಾಜ ಮಕ್ಕಳ ಪಾರ್ಕ್‌ನಲ್ಲಿ ಬೀದಿ ದೀಪಗಳನ್ನು ಅಳವಡಿಸುವಂತೆ ಸಾರ್ವಜನಿಕರು ಮನವಿ ಮಾಡಿದರು.
9. ಇಂದಿನ ಮತ್ತು ಹಿಂದಿನ ಸಭೆಗಳಿಗೆ ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಬೆಸ್ಕಾಂ ಇಲಾಖೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಅಧಿಕಾರಿಗಳು ಗೈರು ಹಾಜರಾಗಿದ್ದು, ಮುಂದಿನ ಸಭೆಗಳಿಗೆ ಕಡ್ಡಾಯವಾಗಿ ಹಾಜರಿರುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

ಮೇಲ್ಕಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಕುಂದುಕೊರತೆಗಳನ್ನು ಆದಷ್ಟು ಬೇಗೆ ಹಂತ ಹಂತವಾಗಿ ಬಗೆಹರಿಸಲಾಗುವುದೆಂದು ವಾರ್ಡ್‌ನ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಕೋರುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು | ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್ ನಂ: 21, ಹೆಬ್ಬಾಳ | ವಾರ್ಡ್ ನಂ: 21, ಹೆಬ್ಬಾಳ |

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ